KAUK620022612024

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.

-: ಉಪಸ್ಥಿತರು :-

ಶ್ರೀ ಈರಣ್ಣ ಹುಣಶಿಕಟ್ಟಿ.,

ಬಿ.ಕಾಂ.,ಎಲ್.ಎಲ್.ಬಿ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ

ಜೆ.ಎಮ್.ಎಫ್.ಸಿ., ಹೊನ್ನಾವರ.

ದಿನಾಂಕ 21 ನೇ ಜೂನ್ ಮಾಹೆಯ 2025 ನೇ ಇಸವಿ.

ಮೂಲ ದಾವಾ ಸಂಖ್ಯೆ- 117/2024.

ವಾದಿಯರು:- **ರಮೇಶ ನಾರಾಯಣ ನಾಯ್ಕ .**
ವಯಸ್ಸು ಸುಮಾರುಃ- 48 ವರ್ಷ,
ಉದ್ಯೋಗಃ- ರೈತ,
ಸಾಕೀನಃ- ತೋಟದಮಕ್ಕಿ,
ತಾಲೂಕುಃ- ಹೊನ್ನಾವರ (ಉ.ಕ).

(ವಾದಿಯರ ಪರವಾಗಿ ಶ್ರೀ.ಎಸ್.ಜಿ.ಎಚ್.,ವಕೀಲರು)

-ವಿರುದ್ಧ-

ಪ್ರತಿವಾದಿಯರು:- **ಗಜಾನನ ನಾರಾಯಣ ನಾಯ್ಕ ಹಾಗೂ ಇತರರು.**
ವಯಸ್ಸು ಸುಮಾರುಃ- 57 ವರ್ಷ,
ಸಾಕೀನಃ- ತೋಟದಮಕ್ಕಿ,
ಚಿಕ್ಕನಕೋಡ ಗ್ರಾಮ,
ತಾಲೂಕುಃ- ಹೊನ್ನಾವರ (ಉ.ಕ).

(ಪ್ರತಿವಾದಿಯರ ಪರವಾಗಿ ಶ್ರೀ ವಿ.ಆರ್.ಎನ್.,ವಕೀಲರು)

*****

ಮಧ್ಯಂತರ ಅರ್ಜಿ ಸಂಖ್ಯೆ 1 ರ ಪಕ್ಷಗಾರರು.

ಅರ್ಜಿದಾರರು:- **ರಮೇಶ ನಾರಾಯಣ ನಾಯ್ಕ .**

(ಅರ್ಜಿದಾರರ ಪರವಾಗಿ ಶ್ರೀ.ಎಸ್.ಜಿ.ಎಚ್.,ವಕೀಲರು)

-ವಿರುದ್ಧ-

ಎದುರುದಾರರು:- **ಗಜಾನನ ನಾರಾಯಣ ನಾಯ್ಕ ಹಾಗೂ ಇತರರು.**

(ಎದುರುದಾರರ ಪರವಾಗಿ ಶ್ರೀ ವಿ.ಆರ್.ಎನ್.,ವಕೀಲರು)

*****

-: ಮಧ್ಯಂತರ ಅರ್ಜಿ ಸಂಖ್ಯೆ 1 ರ ಮೇಲಿನ ಆದೇಶ :-

ಪ್ರಸ್ತುತ ದಾವೆಯನ್ನು ವಾದಿಯು, ಪ್ರತಿವಾದಿಯರ ವಿರುದ್ದ ಭಾಗಾಂಶದ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ತದನಂತರ, ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಸಿ.ಪಿ.ಸಿ. ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿ, ಈ ದಾವೆಯು ನಿಖಾಲೆ ಆಗುವವರೆಗೆ 1 ನೇ ಪ್ರತಿವಾದಿ ಹಾಗೂ ಅವರ ಕಡೆಯವರು ದಾವಾ ಸ್ಥಳದಲ್ಲಿ ಬಲಾತ್ಕಾರವಾಗಿ ಅಗಳ ತೋಡದಂತೆ, ಬೇಲಿ ಹಾಕದಂತೆ ಮತ್ತು ದಾವಾ ಸ್ಥಳದಲ್ಲಿ ಬದಲಾವಣೆ ಮಾಡದಂತೆ 1 ನೇ ಪ್ರತಿವಾದಿ ಹಾಗೂ ಅವರ ಕಡೆಯವರ ವಿರುದ್ಧ ಮತ್ತು ತಮ್ಮ ಪರವಾಗಿ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವನ್ನು ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

2. **ಮಧ್ಯಂತರ ಅರ್ಜಿ ಸಂಖ್ಯೆ 1 ರ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ :-**

ವಾದಿಯು ಅರ್ಜಿಗೆ ಪೂರಕವಾಗಿ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಹೇಳುವುದೇನೆಂದರೆ, ದಾವಾ ಆಸ್ತಿಗಳು ವಾದಿ-ಪ್ರತಿವಾದಿಯರ ಅವಿಭಕ್ತ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿದ್ದು, ಸದರಿ ದಾವಾ ಆಸ್ತಿಗಳಲ್ಲಿ ವಾದಿ-ಪ್ರತಿವಾದಿಯರಿಗೆ ಪಿತ್ರಾರ್ಜಿತ ಅಂಶವಾರಿ ಹಕ್ಕಿರುತ್ತದೆ. ಸದರಿ ಆಸ್ತಿಯಲ್ಲಿ ವಾದಿಗೆ 1/5 ಅಂಶವಾರಿ ಹಕ್ಕಿರುತ್ತದೆ. 1 ನೇ ಪ್ರತಿವಾದಿಯು ಏಕಾ-ಏಕಿ

ದಿನಾಂಕ 11-03-2025 ರಂದು ದಾವಾ ಸ್ಥಳಗಳ ಪೈಕಿ ಬೆಲೆಬಾಳುವ ಭಾಗಾಯ್ತು ಸ್ಥಳವು ತನ್ನದೆಂದು ಹೇಳಿಕೊಂಡು ಸದರಿ ಸ್ಥಳದ ಉದ್ದಕ್ಕೂ ಬಲತ್ಕಾರವಾಗಿ ಅಗಳವನ್ನು ತೋಡಿ, ಬೇಲಿ ಹಾಕಿ ದಾವಾ ಸ್ಥಳದಲ್ಲಿ ಗಡಿ ಹಾಕುವುದು ಮತ್ತು ತನ್ನಿಚ್ಚೆ ಪ್ರಕಾರ ಬದಲಾವಣೆ ಮಾಡಲು ಪ್ರಾರಂಭಿಸಿರುತ್ತಾನೆ. ಈ ರೀತಿ ದಾವಾ ಸ್ಥಳದಲ್ಲಿ 1 ನೇ ಪ್ರತಿವಾದಿಯು ಅಗಳ ತೋಡಿ ಬೇಲಿ ಹಾಕಿದಲ್ಲಿ ವಾದಿಗೆ ಸಹಿಸಲಾರದಷ್ಟು ಲುಕ್ಸಾನು ಸಂಭವಿಸುತ್ತದೆ. ಆದ್ದರಿಂದ, ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ.

3. ಸದರಿ ಅರ್ಜಿಗೆ 1 ನೇ ಪ್ರತಿವಾದಿಯ-ಪರ ವಕೀಲರು ತಮ್ಮ ತಕರಾರನ್ನು ಸಲ್ಲಿಸಿ, ಹೇಳುವುದೇನೆಂದರೆ, ವಾದಿಯು, ಕೇವಲ ಈ ಪ್ರತಿವಾದಿಯರನ್ನು ಸತಾಯಿಸುವ ದುರುದ್ದೇಶದಿಂದ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಪ್ರತಿವಾದಿಯು ದಾವಾ ಸ್ಥಳಕ್ಕೆ ಸಂಬಂಧಪಟ್ಟಂತೆ ಇದುವರೆಗೂ ಯಾವುದೇ ರೀತಿಯ ಸ್ಥಿತ್ಯಂತರ ವ ಬದಲಾವಣೆ ಮಾಡಿದ್ದಾಗಲೀ, ಹಾಗೂ ಈ ಹಿಂದೆ ಇದ್ದ ಕಾಲುವೆಯನ್ನು ದುರಸ್ತಿಗೊಳಿಸಿದ್ದಾಗಲೀ ವ ಅಗಲ ಮಾಡಿದ್ದಾಗಲೀ ವ ದಾವಾ ಸ್ಥಳದ ಸುತ್ತಲೂ ಗಡಿ ಬೇಲಿ ಹಾಕಿದ್ದಾಗಲೀ ಇರುವುದಿಲ್ಲ. ಆದರೆ, ಮಳೆಗಾಲದ ನೀರು ಹೋಗಲು ದಾವಾ ಸ್ಥಳದಲ್ಲಿ ಅನಾದಿಕಾಲದಿಂದಲೂ ಕಾಲುವೆ ಇದ್ದು, ಅದನ್ನು ವಾದಿಯು ಸ್ವಚ್ಚಗೊಳಿಸಿ ಉಪಯೋಗಿಸಿಕೊಂಡು ಬಂದಿದ್ದು ಇರುತ್ತದೆ. ಆದ್ದರಿಂದ, ಈ ಅರ್ಜಿಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಪ್ರಾರ್ಥಿಸಿರುತ್ತಾರೆ.

4. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು ಮತ್ತು ದಾವೆಯಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಸದರಿ ದಾಖಲೆಗಳನ್ನು ಪರಿಶೀಲಿಸಿದ ನಂತರ ನ್ಯಾಯಾಲಯಕ್ಕೆ ಈ ಅರ್ಜಿಗಳ ನಿರ್ಧರಣೆಗಾಗಿ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

*****

-:ಅಂಶಗಳು:-

1. ಮೇಲ್ನೋಟಕ್ಕೆ ಸಮ್ಮತವಾದ ದಾವೆಯನ್ನು ವಾದಿಯು ತಂದಿರುತ್ತಾರೆಯೇ?
2. ದಾವೆಯಲ್ಲಿ ಅನುಕೂಲತೆಯ ಒಲವು ತಮ್ಮ ಪರ ಇದೆ ಎಂದು ವಾದಿಯು ರುಜುವಾತುಪಡಿಸುವರೇ?
3. ಅರ್ಜಿಯನ್ನು ಪುರಸ್ಕರಿಸದಿದ್ದರೇ ತಮಗೆ ತುಂಬಲಾರದ ನಷ್ಟ ಉಂಟಾಗುತ್ತದೆಂದು ವಾದಿಯು ರುಜುವಾತುಪಡಿಸುವರೇ?
4. ಯಾವ ಆದೇಶ?

5. ಉಭಯ ಪಕ್ಷಗಾರರ ವಾದವನ್ನು ಆಲಿಸಿ, ದಾವೆಯಲ್ಲಿರುವ ದಾಖಲೆಗಳನ್ನು ದಾಖಲೆಗಳನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಕಾರಣಗಳಿಗಾಗಿ ಮೇಲ್ಕಂಡ ಅಂಶಗಳಿಗೆ ಮುಂದಿನಂತೆ ಉತ್ತರಿಸಲಾಗಿದೆ.

ಅಂಶ ಸಂಖ್ಯೆ:-1. ಸಕಾರಾತ್ಮಕವಾಗಿ
ಅಂಶ ಸಂಖ್ಯೆ:-2. ಸಕಾರಾತ್ಮಕವಾಗಿ
ಅಂಶ ಸಂಖ್ಯೆ:-3. ಸಕಾರಾತ್ಮಕವಾಗಿ
ಅಂಶ ಸಂಖ್ಯೆ:-4. ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ,

****

-: ಕಾರಣಗಳು :-

6. **ಅಂಶ ಸಂಖ್ಯೆ 1** :- ವಾದಿಯ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ 1 ನೇ ಪ್ರತಿವಾದಿ ಹಾಗೂ ಅವರ ಕಡೆಯವರು ದಾವಾ ಸ್ಥಳದಲ್ಲಿ ಬಲಾತ್ಕಾರವಾಗಿ ಅಗಳ ತೋಡುವುದು ಹಾಗೂ ಬೇಲಿ ಹಾಕಲು ಮುಂದಾಗಿರುತ್ತಾರೆ ಎಂಬುದಾಗಿ ಹೇಳಿರುತ್ತಾರೆ. ಆದ್ದರಿಂದ ವಾದಿಯ ಹಕ್ಕನ್ನು ಕಾಪಾಡುವ ದೃಷ್ಟಿಯಿಂದ ನ್ಯಾಯಸಮ್ಮತವಾದ ತಾತ್ಕಾಲಿಕ ನಿರ್ಭಂದಕಾಜ್ಞೆ ಪರಿಹಾರವನ್ನು ತಮ್ಮ ಪರವಾಗಿ ಹೊರಡಿಸಬೇಕು ಎಂದು ಕ್ಲೇಮನ್ನು ಮಾಡಿರುತ್ತಾರೆ.

7. ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡುವ ಪ್ರಮುಖ ಉದ್ದೇಶವು ಪಕ್ಷಗಾರರಿಗೆ ನೀಡುವಂತ ಕಾನೂನು ಬದ್ಧ ಹಕ್ಕುಗಳು ಮತ್ತು ಸದರಿ ಹಕ್ಕುಗಳನ್ನು ಸಂಬಂಧಿಸುವ ವ್ಯಾಜ್ಯಗಳು ಸಂಪೂರ್ಣವಾಗಿ ತೀರ್ಮಾನವಾಗುವವರೆಗೆ ಸ್ವತ್ತನ್ನು ಯಾಥಾಸ್ಥಿತಿಯಲ್ಲಿ ಕಾಪಾಡುವುದು. ತಾತ್ಕಾಲಿಕ ನಿರ್ಭಂಧಕಾಜ್ಞೆ ಅರ್ಜಿಯನ್ನು ತೀರ್ಮಾನಿಸುವಾಗ, ನ್ಯಾಯಾಲಯವು ಸದರಿ ನಿರ್ಭಂಧಕಾಜ್ಞೆ ಆದೇಶವನ್ನು ನೀಡಿರುವುದರಿಂದ ಯಾವ ರೀತಿಯ ಪರಿಣಾಮಗಳು ಪಕ್ಷಗಾರರ ಮೇಲಿನ ಹಿತಾಸಕ್ತಿಯ ಮೇಲೆ ಪರಿಣಾಮವನ್ನು ಉಂಟುಮಾಡುತ್ತವೆ ಎಂಬುದನ್ನು ಪರಿಗಣಿಸುವುದು ಅವಶ್ಯವಾಗಿರುತ್ತದೆ. ತಾತ್ಕಾಲಿಕ ನಿರ್ಭಂಧಕಾಜ್ಞೆ ಆದೇಶವು ನ್ಯಾಯಸಮ್ಮತವಾದ ಪರಿಹಾರವಾಗಿದ್ದು, ಸದರಿ ಪರಿಹಾರವನ್ನು ನೀಡುವುದು ನ್ಯಾಯಾಲಯದ ವಿವೇಚನಾತ್ಮಕವಾದ ಅಧಿಕಾರವಾಗಿರುತ್ತದೆ. ಆದರೆ ಸದರಿ ವಿವೇಚನಾತ್ಮಕ ಅಧಿಕಾರವನ್ನು ನ್ಯಾಯಾಲಯವು ನಿರಂಕುಶ ರೀತಿಯಲ್ಲಿ ಚಲಾಯಿಸುವಂತಹದ್ದಾಗಿರುವುದಿಲ್ಲ. ಅಂದರೆ ನ್ಯಾಯಾಲಯವು ತಾತ್ಕಾಲಿಕ ನಿರ್ಭಂಧಕಾಜ್ಞೆ ನೀಡಬೇಕಾದರೆ ವಾದಿಯು ನ್ಯಾಯಾಲಯಕ್ಕೆ ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ತೋರ್ಪಡಿಸಿರುವರೇ? ಅನುಕೂಲತೆಯ ಒಲವು ತನ್ನ ಪರವಾಗಿ ಇದೆಯೇ? ಮತ್ತು ಅರ್ಜಿಯನ್ನು ವಜಾಗೊಳಿಸುವುದರಿಂದ ತನಗೆ ತುಂಬಲಾರದ ನಷ್ಟ ಮತ್ತು ಸರಿಪಡಿಸಲಾಗದ ಕ್ಷತಿಯುಂಟಾಗುತ್ತದೆಯೇ? ಎಂಬುದನ್ನು ನಿರೂಪಿಸಬೇಕಾಗಿರುತ್ತದೆ. ಪ್ರಸ್ತುತ ಅಂಶದಲ್ಲಿ ಈ ನ್ಯಾಯಾಲಯವು ವಾದಿಯು ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ನ್ಯಾಯಾಲಯಕ್ಕೆ ತಂದಿರುತ್ತಾರೆಯೇ ಎನ್ನುವ ಅಂಶವನ್ನು ಪರಿಗಣಿಸಲು ಮುಂದಾಗಿರುತ್ತದೆ. ಈ ಹಂತದಲ್ಲಿ ವಾದಿಯರು ತಮ್ಮ ಪರವಾಗಿ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆ ಇದೆ ಎನ್ನುವುದನ್ನು ಈ ಹಂತದಲ್ಲಿ ತೋರ್ಪಡಿಸುವ ಹೊಣೆಗಾರಿಕೆ ವಾದಿಯರ ಮೇಲಿರುತ್ತದೆ. ಈ ನ್ಯಾಯಾಲಯವು ಸ್ಪಷ್ಟಪಡಿಸುವುದೇನೆಂದರೆ, ಈ ಹಂತದಲ್ಲಿ ನ್ಯಾಯಾಲಯವು ಕೇವಲ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ಮಾತ್ರ

ಪರಿಶೀಲಿಸುತ್ತಿದ್ದು, ಪಕ್ಷಗಾರರ ಮೊದಲ ನೋಟದ ಸ್ವಾಮ್ಯವನ್ನಲ್ಲ (ಒಡೆತನ). ಈ ಹಂತದಲ್ಲಿ ನ್ಯಾಯಾಲಯವು ದೀರ್ಘವಾದ ವಿಚಾರಣೆಯನ್ನು ಮಾಡುವುದು ನಿಷಿದ್ಧವಾಗಿದ್ದು ಪಕ್ಷಗಾರರ ದಾವಾ ಆಸ್ತಿ ಮತ್ತು ಪ್ರತಿವಾದಿಯ ಆಸ್ತಿಗಳ ಮೇಲಿನ ಸ್ವಾಮ್ಯದ (ಒಡೆತನ) ಬಗ್ಗೆಯೇ ಚರ್ಚಿಸುವ ಹಾಗಿಲ್ಲ.

8. ಈ ಮೇಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಈ ನ್ಯಾಯಾಲಯವು ವಾದಿಯು ಸಲ್ಲಿಸಿರುವ ಅರ್ಜಿ ಮತ್ತು ಪ್ರಾರ್ಥಿಸಿರುವಂತೆ ಪರಿಹಾರವನ್ನು ಪಡೆಯಲು ಅರ್ಹರೇ ಎಂಬುದನ್ನು ನಿರ್ಣಯಿಸಬೇಕಾಗಿರುತ್ತದೆ.

9. ವಾದಿಯು ಕೇವಲ ಆರೋಪಣೆಯನ್ನು ಮಾಡುವುದರಿಂದ ನ್ಯಾಯಾಲಯದಿಂದ ಆದೇಶವನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಅದೇ ರೀತಿ ತಮ್ಮ ಆರೋಪಣೆಗೆ ಪೂರಕವಾದ ಮೇಲ್ನೋಟಕ್ಕೆ ಸಮ್ಮತವಾದ ಪುರಾವೆಗಳನ್ನು ಹಾಜರುಪಡಿಸಬೇಕಾಗಿರುತ್ತದೆ.

10. ಪ್ರಸ್ತುತ ಪ್ರಕರಣದಲ್ಲಿ ವಾದಿಯು ತಮ್ಮ ಕ್ಲೇಮಿನ ಸಮರ್ಥನೆಗಾಗಿ ದಾವಾ ಸ್ಥಳದ ಪ್ರಸ್ತುತ ಪಹಣಿ ಪತ್ರಿಕೆ, ಭೂ ನ್ಯಾಯ ಮಂಡಳಿಗೆ ಸಲ್ಲಿಸಿದ ಅರ್ಜಿ ಪ್ರತಿ, ಭೂ ನ್ಯಾಯ ಮಂಡಳಿಯ ಆದೇಶದ ಪ್ರತಿ, ನಮೂನೆ 10 ರ ಪ್ರತಿ ಹಾಗೂ ಮ್ಯುಟೇಶನ ಎಂಟ್ರಿ ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ. ವಾದಿಯು ಹಾಜರುಪಡಿಸಿರುವ ದಾಖಲೆಗಳನ್ನು ಮಾನ್ಯ ನ್ಯಾಯಾಲಯವು ಕೂಲಂಕೂಷವಾಗಿ ಪರಿಶೀಲಿಸಿದೆ. ಅವುಗಳೆಂದರೇ,

11. ದಾವಾ ಸ್ಥಳದ ಪ್ರಸ್ತುತ ಪಹಣಿ ಪತ್ರಿಕೆಯನ್ನು ಪರಿಶೀಲಿಸಿದಾಗ, ಅದರಲ್ಲಿ ಕಂಡುಬರುವುದೇನೆಂದರೇ, ವಾದಿಯು ತನ್ನ ವಾದಪತ್ರದಲ್ಲಿ ಹೇಳಿರುವಂತೆಯೇ, ಮೃತ ನಾರಾಯಣ ನಾಯ್ಕರವರ ಹೆಸರು ಕಾಲಂ ನಂ. 9 ರಲ್ಲಿ ನಮೂದಾಗಿದ್ದು ಇರುತ್ತದೆ. ವಾದಿಯು ವಾದಪತ್ರದಲ್ಲಿ ಹೇಳಿರುವಂತೆ, ಅವರ ತಂದೆ ನಾರಾಯಣ ನಾಯ್ಕ ಹಾಗೂ ಹನುಮಂತ ನಾಯ್ಕ & ಸುಬ್ರಾಯ ನಾಯ್ಕರವರಿಗೆ ದಾವಾ ಸ್ಥಳಗಳು ಭೂ ನ್ಯಾಯ

ಮಂಡಳಿಯಿಂದ ಮಂಜೂರಾಗಿರುವುದು ಭೂ ನ್ಯಾಯ ಮಂಡಳಿಯ ಆದೇಶದಿಂದ ಕಂಡು ಬರುತ್ತದೆ. ಪ್ರಸ್ತುತ ಅರ್ಜಿಯಲ್ಲಿನ ದಾಖಲೆಗಳನ್ನು ಪರಿಶೀಲಿಸಿದಾಗ, ವಾದಿಯು ಹೂಡಿರುವ ಈ ದಾವೆಯು ಮೇಲೋನೋಟಕ್ಕೆ ಸಮ್ಮತ ದಾವೆಯಾಗಿದೆಯೆಂದು ಕಂಡು ಬರುತ್ತದೆ. ಅದಾಗ್ಯೂ, ದಾವಾ ಸ್ಥಳಗಳ ಕಂದಾಯ ದಾಖಲೆಗಳಲ್ಲಿ ವಾದಿ ಪ್ರತಿವಾದಿಯರ ಹೆಸರು ನಮೂದಾಗದೇ ಇದ್ದರೂ ಸಹ, ವಾದಿಯು ವಾದ ಪತ್ರದಲ್ಲಿ ಹೇಳಿರುವಂತೆ ತನ್ನ ಮೃತ ತಂದೆಯಾದ ನಾರಾಯಣ ನಾಯ್ಕುರವರ ಹೆಸರು ನಮೂದಾಗಿದ್ದು ಕಂಡು ಬರುತ್ತದೆ.

12. ವಾದಿಯ ಪರ ವಕೀಲರ ವಾದವೇನೆಂದರೆ, ವಾದಿಯು ಮೇಲ್ನೋಟಕ್ಕೆ ಸಾಬೀತುಪಡಿಸುವಂತಹ ಮೊಕದ್ದಮೆಯನ್ನು ನ್ಯಾಯಾಲಯದ ಮುಂದೆ ಈ ಹಂತದಲ್ಲಿ ತೋರ್ಪಡಿಸಿದ್ದು, ವಾದಿಯ ಪರವಾಗಿ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡಬೇಕೆಂದು ಕೋರಿರುತ್ತಾರೆ.

13. ಪ್ರಸ್ತುತ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ಧ ಭಾಗಾಂಶದ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ವಾದಿಯು ಸಲ್ಲಿಸಿದ ದಾಖಲಾತಿಗಳನ್ನು ಕೂಲಂಕೂಷವಾಗಿ ಪರಿಶೀಲಿಸಿ ನೋಡಿದಾಗ ವಾದಿಯು ಮೇಲ್ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ತಂದಿರುತ್ತಾರೆ ಎಂಬ ಅಭಿಪ್ರಾಯಕ್ಕೆ ಬಂದು ಈ ನ್ಯಾಯಾಲಯವು **ಅಂಶ ಸಂಖ್ಯೆ 1 ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತದೆ.**

14. **ಅಂಶ ಸಂಖ್ಯೆ 2 & 3** :- ನ್ಯಾಯ ಸಮ್ಮತವಾದ ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ಪಡೆದುಕೊಳ್ಳಲು ವಾದಿಯು ತಾತ್ಕಾಲಿಕ ನಿರ್ಬಂಧಕಾಜ್ಞೆಯ 2 & 3 ನೇ ನಿಯಮಗಳು ತಮ್ಮ ಪರವಾಗಿದೆ ಎಂದು ನಿರೂಪಿಸುವುದು ಅವಶ್ಯವಿರುತ್ತದೆ.

15. ಪ್ರತಿವಾದಿಯರ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ವಾದಿಯು ಸ್ವಚ್ಛ ಮನಸ್ಸಿನಿಂದ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ವಾದಿಯು ಆರೋಪಣೆಗಳನ್ನು ತನ್ನ

ಅನುಕೂಲಕ್ಕೆ ತಕ್ಕಂತೆ ಈ ದಾವೆಯನ್ನು ಸಲ್ಲಿಸಲು ಊಹೆ ಮಾಡಿಕೊಂಡಿರುವ ಸಂಗತಿಗಳಾಗಿರುತ್ತವೆ. ಆದ್ದರಿಂದ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

16. ಉಭಯಪಕ್ಷಗಾರರ ಪರ ವಕೀಲರು ಮಂಡಿಸಿದ ವಾದವನ್ನು ಆಲಿಸಿದ ನಂತರ, ನ್ಯಾಯಾಲಯವು ಪ್ರಸ್ತುತ ಅರ್ಜಿಯನ್ನು ತೀರ್ಮಾನಿಸುವ ಕಾರಣಕ್ಕಾಗಿ, ಪಕ್ಷಗಾರರು ಮಧ್ಯಂತರ ಅರ್ಜಿಯ ಮೇಲೆ ಸಲ್ಲಿಸಿರುವ ವಾದಾಂಶಗಳು ಮತ್ತು ಹಾಜರುಪಡಿಸಿರುವ ದಸ್ತಾವೇಜುಗಳನ್ನು ಕೂಲಂಕೂಷವಾಗಿ ಪರಿಶೀಲಿಸಿದ ನಂತರ, ಒಂದು ವೇಳೆ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ವಾದಿಯ ಪರವಾಗಿ ನೀಡಿದ್ದೇ ಆದಲ್ಲಿ, ಅದರಿಂದ ಪ್ರತಿವಾದಿಯರಿಗೆ ಹೆಚ್ಚಿನ ಕೇಡು, ಶ್ರಮ ಮತ್ತು ಅನಾನುಕೂಲತೆಯಾಗುವುದಿಲ್ಲವೆಂದು ಅಭಿಪ್ರಾಯಪಡುತ್ತದೆ ಹಾಗೂ ಒಂದು ವೇಳೆ ಪ್ರತಿವಾದಿಯರ ವಿರುದ್ಧ ನಿರ್ಭಂಧಕಾಜ್ಞೆಯನ್ನು ನೀಡದೆ ಇದ್ದರೆ ವಾದಿಗೆ ತುಂಬಲಾರದ ನಷ್ಟ ಹಾಗೂ ಸರಿಪಡಿಸಲಾಗದ ಕ್ಷತಿಯುಂಟಾಗುತ್ತದೆ ಉಂಟಾಗುತ್ತದೆ ಎಂಬ ಅಭಪ್ರಾಯಕ್ಕೆ ಬಂದು **ಅಂಶ ಸಂಖ್ಯೆ** 2 & 3 **ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತದೆ.**

ಈ ಮೇಲಿನ ಅಂಶಗಳನ್ನು ಮಧ್ಯಂತರ ಅರ್ಜಿ ಸಂಖ್ಯೆ 1 ರ ಕುರಿತಾಗಿ ಮಾತ್ರ ಚರ್ಚೆ ಮಾಡಲಾಗಿರುತ್ತದೆ.

17. **ಅಂಶ ಸಂಖ್ಯೆ 4** :- ಈ ಮೇಲ್ಕಂಡ ಕಾರಣಗಳಿಗೆ ಈ ಮುಂದಿನಂತೆ ಆದೇಶಿಸಲಾಗಿದೆ.

ಆ ದೇ ಶ

ವಾದಿಯು ಸಿ.ಪಿ.ಸಿ., ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ಪುರಸ್ಕರಿಸಲಾಗಿದೆ.

ಈ ದಾವೆಯು ಅಂತಿಮವಾಗಿ ಇತ್ಯರ್ಥವಾಗುವವರೆಗೂ 1 ನೇ ಪ್ರತಿವಾದಿ ಅಥವಾ ಅವರ ಕಡೆಯವರು ದಾವಾ ಸ್ಥಳದಲ್ಲಿ ಬಲಾತ್ಕಾರವಾಗಿ ಅಗಳ ತೋಡದಂತೆ, ಬೇಲಿ ಹಾಕದಂತೆ ಮತ್ತು ದಾವಾ ಸ್ಥಳದಲ್ಲಿ ಬದಲಾವಣೆ ಮಾಡದಂತೆ ತಾತ್ಕಾಲಿಕವಾಗಿ ನಿರ್ಭಂಧಿಸಲಾಗಿದೆ.

ವೆಚ್ಚಗಳ ಬಗ್ಗೆ ಯಾವುದೇ ಆದೇಶವಿರುವುದಿಲ್ಲ.

(ಈ ಮೇಲ್ಕಂಡ ಆದೇಶವನ್ನು ನಾನು ನೇರವಾಗಿ ಲ್ಯಾಪ್‌ಟಾಪ್‌ನಲ್ಲಿ ಬೆರಳಚ್ಚು ಮಾಡಿ ಆ ನಂತರ ತಪ್ಪುಗಳನ್ನು ಸರಿಪಡಿಸಿ, ನಂತರ ನನ್ನ ಸಹಿಯೊಂದಿಗೆ ಈ ದಿನ ಅಂದರೆ 21 **ನೇ ಜೂನ್** 2025 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

ಸಹಿ ಇದೆ.

(ಈರಣ್ಣ ಹುಣಶಿಕಟ್ಟಿ)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಮ್.ಎಫ್.ಸಿ., ಹೊನ್ನಾವರ.

*****